ಶ್ರೀ ಎಂ. ವೀರಪ್ಪ ಮೊಯಿಲಿ :– ಈ 20 ಲಕ್ಷ ರೂಪಾಯಿನಲ್ಲಿ ಅದು ಸೇರಿಲ್ಲ. ಆದರೆ 20 ಲಕ್ಷ ರೂಪಾಯಿ ಬಹಳ ದುಬಾರಿಯಾಯಿತೆಂದು ತಾವು ಹೇಳುತ್ತೀರಿ. ನಾನು ಇದರಲ್ಲಿ ಪರಿಣಿತನಲ್ಲ; ಸಂಬಂಧಪಟ್ಟವರು ಒಂದು ಅಂದಾಜು ಪಟ್ಟಿ ಮಾಡಿದ್ದಾರೆ.

That will be scrutinised by the Government of India; A foreign agency has been involved for con'ucting survey and investigation work. This has already been entrusted to them.

ರಿಪೇರಿಗೆ ಈಗಾಗಲೇ ಬಹಳಷ್ಟು ಖರ್ಚು ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಅದನ್ನೂ ವಿಚಾರ ಮಾಡುತ್ತೇನೆ.

ವಿಷಯ (2) :– ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ (ಹುಬ್ಬಳ್ಳಿ) :– ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ–ಧಾರವಾಡ ಮಹಾ ನಗರದ ಕುಡಿಯುವ ನೀರಿನ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಿರುವುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

† ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಸಧ್ಯ ಉಣಕಲ್ ಕೆರೆ ಬತ್ತಿಹೋಗಿದೆ ಹಾಗೂ ಪ್ರತಿದಿನ 7.50 ಎಂ. ಜಿ. ಡಿ. ನೀರನ್ನು ಮಲಪ್ರಭಾ ಜಲಾಶಯದಿಂದ ಹಾಗೂ 7.50 ಎಂ. ಜಿ. ಡಿ. ನೀರನ್ನು ನೀರಸಾಗರ ಜಲಾಶಯದಿಂದ ದಿನಬಿಟ್ಟು ದಿನ ಸರಬರಾಜು ಮಾಡಲಾಗುತ್ತಿದೆ ಇದಲ್ಲದೆ ಇಲ್ಲಿಯವರೆಗೆ 497 ಕೊಳವೆ ಬಾವಿಗಳನ್ನು ತೋಡಲಾಗಿದೆ. ನೀರಸಾಗರ ಜಲಾಶಯದಲ್ಲಿ ಇರುವ ನೀರನ್ನು ಬಿಟ್ಟು ದಿನ ಪಂಪ್ ಮಾಡಿದರೆ ನೀರು ಜೂನ್ 1991ರ ಕೊನೆಯವರೆಗೆ ದೊರೆಯುತ್ತದೆ.

ನೀರು ಸರಬರಾಜನ್ನು ಸುಧಾರಿಸಲು ಕೊಳವೆ ಬಾವಿಗಳನ್ನು ಅವಳಿ ನಗರದ ಎಲ್ಲಾ ಪ್ರದೇಶಗಳಲ್ಲಿ ತೋಡಲಾಗಿದೆ ಹಾಗೂ ಇವುಗಳಿಗೆ ಕೈಪಂಪನ್ನು ಹಾಗೂ ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ. ಇವುಗಳ ವಿವರವು ಕೆಳಕಂಡಂತೆ ಇರುತ್ತದೆ.

ನಗರದ ಹೆಸರು	ಒಟ್ಟು ಕೊಳವೆ ಬಾವಿಗಳನ್ನು ತೋಡಿರುವ ಸಂಖ್ಯೆ	ವಿಫಲವಾದ ಕೊಳವೆ ಬಾವಿಗಳು	ಕೈಪಂಪನ್ನು ಅಳವಡಿಸಿರುವ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಪಂಪನ್ನು ಅಳವಡಿಸಿರುವ ಕೊಳವೆ ಬಾವಿಗಳ ಸಂಖ್ಯೆ
ಹುಬ್ಬಳ್ಳಿ	366	3	343	20
ಧಾರವಾಡ	131	2	120	9
ಒಟ್ಟು :	497	5	463	29

ಮೇಲೆ ತಿಳಿಸಲಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಕುಡಿಯುವ ನೀರಿನ ಪರಿಸ್ಥಿತಿಯನ್ನು ಸುಧಾರಿಸಲು ಹುಬ್ಬಳ್ಳಿ ಧಾರವಾಡ ಮಹಾನಗರದ ನೀರಿನ ಅತೀ ಬವಣೆ ಇರುವ ಭಾಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

† ಶ್ರೀ ಗೋಪಿನಾಥ ಆರ್. ಸಾಂಡ್ರಾ :– ಮಂತ್ರಿಗಳು ಕೊಟ್ಟಂತಹ ಉತ್ತರ ಸಮಾಧಾನಕರವಾಗಿಲ್ಲ. ಹುಬ್ಬಳ್ಳಿ ಧಾರವಾಡ ಮಹಾ ನಗರದಲ್ಲಿ ಕುಡಿಯುವ ನೀರಿನ ಬವಣೆ ಬಹಳಷ್ಟು ಇದೆ. ಈಗ ನಾವು ಮಲಪ್ರಭಾ ಯೋಜನೆಯ ಎರಡನೇ ಹಂತವನ್ನು ಏನು ತೆಗೆದುಕೊಂಡು ಬಂದಿದ್ದೇವೆ, ಇದರ ಪೌಂಡೇಷನ್ ಸ್ಟೋನ್ ಹಾಕಿ 5 ತಿಂಗಳಾಯಿತು. ಅಲ್ಲಿಯೂ ಕೂಡ ಏನು ಪ್ರೋಗ್ರೆಸ್ ಆಗುತ್ತಿಲ್ಲ. ಇದಲ್ಲದೆ ಕೆ. ಯು. ಡಬ್ಲು. ಎಸ್. ನವರಿಗೆ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದರೆ ಅದರಲ್ಲಿ ಒಂದು ಕೋಟಿ 13 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಯಾವುದೇ ಕೆಲಸ ಸಂಪೂರ್ಣವಾಗಿ ಆಗಿಲ್ಲ. ಉಣಕಲ್‌ಕೆರೆ

ಬತ್ತಿ ಹೋಗಿದೆ. ನೀರಸಾಗರ ಯೋಜನೆಯ ನೀರು ಕೆಳಗೆ ಹೋಗಿದೆ. ಇಂಥ ಸಂದರ್ಭದಲ್ಲಿ ಜನ ಏನು ಮಾಡಬೇಕು ? ಕುಡಿಯುವ ನೀರು ಇಲ್ಲದಿದ್ದರೆ ಹೇಗೆ ಬದುಕಬೇಕೆಂಬ ಪ್ರಶ್ನೆ ಬಹಳ ಗಂಭೀರವಾಗಿದೆ. ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಬಗ್ಗೆ ಬಹುಶಃ ಇನ್ನು ಎರಡು ಮೂರೇ ತಿಂಗಳಲ್ಲಿ ಒಂದು ಹೋರಾಟ ಚಳುವಳಿ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಆಗುತ್ತದೆ. ಅದು ಆಗದಂತೆ ಮಾಡಬೇಕೆಂದರೆ ಆಲ್ಲಿಗೆ ನೀರನ್ನು ಒದಗಿಸಬೇಕು. ಕನಿಷ್ಪಪಕ್ಷ ಕೊಳವೆ ಬಾವಿಗಳನ್ನಾದರೂ ತೋಡಬೇಕು. ಈಗ ತೆಗೆದಿರತಕ್ಕ ಕೊಳವೆ ಬಾವಿಗಳು ಸಾಕಷ್ಟು ಇಲ್ಲ, ಬಹಳ ಕಡಿಮೆ ಇವೆ. ನಮ್ಮ ಸರ್ಕಾರ ಬಂದ ಮೇಲೆ ಕನಿಷ್ಪ 200 ಕೊಳವೆ ಬಾವಿಗಳನ್ನಾದರೂ ತೆಗೆಯಬೇಕೆಂದು ಹೇಳುತ್ತೇನೆ. ಅಲ್ಲಿ ಕೇವಲ 130 ಬಾವಿಗಳನ್ನು ತೆಗೆದಿದ್ದಾರೆ. ಅದು ಷ್ಟೇನು ಸಾಲದು. ಮೊದಲು ಹುಬ್ಬಳ್ಳಿ ಧಾರವಾಡ ಮಹಾ ನಗರದ ಜನಸಂಖ್ಯೆ 4 ಲಕ್ಷ ಇದ್ದರೆ ಇಂದು 7 ಲಕ್ಷ ಆಗಿದೆ. ಎಕ್ಸ್‌ಟೆನ್‌ಷನ್ ಏರಿಯಾಗಳು ಸಾಕಷ್ಟು ಆಗಿವೆ. ಅಲ್ಲಿಗೆ ನೀರು ಸರಿಯಾಗಿ ಮುಟ್ಟುತ್ತಿಲ್ಲ. ಜನರಿಗೆ ತುಂಬಾ ತೊಂದರೆಯಾಗಿದೆ. ಪೈಪುಗಳನ್ನು ಸಹ ಹಾಕಿಲ್ಲ. ನಮ್ಮ ಒಂದು ಅಂದಾಜಿನ ಪ್ರಕಾರ ಹುಬ್ಬಳ್ಳಿ ಧಾರವಾಡ ಮಹಾ ನಗರಕ್ಕೆ ಕನಿಷ್ಪ 200 ಕೊಳವೆ ಬಾವಿಗಳನ್ನಾದರೂ ತೆಗೆಯಬೇಕು. ನೀವು 10 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿ 30 ಲಕ್ಷ ಎಂದು ಹೇಳಬೇಡಿ. 200 ಬಾವಿಗಳನ್ನು ತೆಗೆಯುವ ಕೆಲಸವನ್ನು ಬೇಗನೆ ಪ್ರಾರಂಭಿಸಬೇಕು. ಇಲ್ಲದಿದ್ದರೆ, ಸರ್ಕಾರಕ್ಕೆ, ಶಾಸಕರಿಗೆ ಆಲ್ಲಿ ಸರಿಯಾಗಿ ಮರ್ಯಾದೆ ಗೌರವ ಸಿಗುವುದಿಲ್ಲ. ದೊಡ್ಡ ಹೋರಾಟ ಚಳುವಳಿ ಪ್ರಾರಂಭವಾಗುತ್ತದೆಂದು ಸರ್ಕಾರದ ಗಮನಕ್ಕೆ ತೀವ್ರವಾಗಿ ತರಬಯಸುತ್ತೇನೆ. ಈಗ ಕೆ.ಯು.ಡಬ್ಲು.ಎಸ್. ನವರು ಏನು ಕೆಲಸ ಮಾಡುತ್ತಿದ್ದಾರೆ ಅವರು ಬಹಳ ಅಲಕ್ಷ್ಯ ಮಾಡುತ್ತಿದ್ದಾರೆ. ಅವರ ಕೆಲಸ ಆಮೆ ವೇಗದಿಂದ ಸಾಗುತ್ತಿದೆ. ಆದ್ದರಿಂದ ಸರ್ಕಾರದವರು ವಿಪ್ ಮಾಡಿ ಅವರನ್ನು ಚುರುಕು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಒಂದು ವೇಳೆ ನೀವು ಕೊಳವೆ ಬಾವಿಗಳನ್ನು ತೋಡದೆ ಇದ್ದರೆ ಬಹಳ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಹಣವನ್ನು ಎಲ್ಲಿಂದಲಾದರೂ ಕೊಡಿ. ಸ್ಪೇರ್‌ಸಿಟಿ ಅಥವಾ ಬೇರೆ ಯಾವುದೇ ಫಂಡ್‌ನಿಂದ ಕೊಡಿ. ನಮ್ಮ ಕಾರ್ಪೊರೇಷನ್‌ನಲ್ಲಿ ಇರುವಂತಹ ಹಣ ಇದಕ್ಕೆ ಸಾಲುವುದಿಲ್ಲ. ನೀವು ಪ್ರತ್ಯೇಕವಾಗಿ 200 ಕೊಳವೆ ಬಾವಿಗಳಿಗೆ ಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಎತಡನೆಯದು ಕೆ. ಯು. ಡಬ್ಲು. ಎಸ್. ನವರು ಏನು 1 ಕೋಟಿ 13 ಲಕ್ಷ ರೂಪಾಯಿನ ಕೆಲಸ ಕೈಗೊಂಡಿದ್ದಾರೆ, ಆ ಕೆಲಸವನ್ನು ಅವರು ಸರಿಯಾಗಿ ಮಾಡುತ್ತಿಲ್ಲ. ಮಲಪ್ರಭಾ ಯೋಜನೆ ಕೆಲಸ ಫೌಂಡೇಷನ್ ಹಾಕಿ ಐದು ತಿಂಗಳಾದರೂ ಒಂದು ನಯಾಪೈಸೆ ಕೆಲಸ ಆಗಿಲ್ಲ. ಹಣ ಕೂಡ ರಿಲೀಸ್ ಆಗಿದೆ, ಆದರೆ ಕೆಲಸ ಮಾಡುತ್ತಿಲ್ಲ. ಈ ರೀತಿಯಾಗಿ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದ ಜನರಿಗೆ ಬಹಳ ತೊಂದರೆಯಾಗಿದೆ. ವಿಶೇಷವಾಗಿ ಬಡವರು ಮಧ್ಯಮ ವರ್ಗದವರಿಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದವರು ದಯಮಾಡಿ ತೀವ್ರ ಗಮನವನ್ನು ಆಲ್ಲಿಗೆ ಕೊಡಬೇಕು ಮತ್ತು ಕೂಡಲೇ 200 ಬಾವಿಗಳನ್ನು ಕೊರೆಸುವಂಥ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹುಬ್ಬಳ್ಳಿ ಧಾರವಾಡ ಮಹಾನಗರದ ಜನರ ಪರವಾಗಿ ಮತ್ತು ಆಲ್ಲಿನ ಕಾರ್ಪೊರೇಷನ್ ಪರವಾಗಿ ಕೇಳಿಕೊಳ್ಳುತ್ತೇನೆ. ದಯಮಾಡಿ ನೀವು ಆಲಕ್ಷ್ಯ ಮಾಡಬೇಡಿ. ಐದು ತಿಂಗಳಾಯಿತು. ಇನ್ನು ಮೂರು ತಿಂಗಳಿಗೆ ಬೇಸಿಗೆ ಬರುತ್ತದೆ. ಆಗ ಬಹಳ ತೊಂದರೆಯಾಗುತ್ತದೆ. ಜನ ಹೌಹಾರುತ್ತಾರೆ. ಆದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಸುದೈವದಿಂದ ಹುಬ್ಬಳ್ಳಿ–ಧಾರವಾಡದಲ್ಲಿ ಎಲ್ಲಿ ಬಾವಿಗಳನ್ನು ತೆಗೆದರೂ ನೀರು ಸಿಗುತ್ತದೆ.

The source of water is available; The only thing is you must get it done through borewells. Kindly take this on priority basis.

ಆದ್ಯತೆ ಕೊಟ್ಟು ಎರಡುನೂರು ಬಾವಿಗಳನ್ನು ತೆಗೆಸಬೇಕು. ಇದಕ್ಕೆ ಹಣ ಇಲ್ಲ, ಕಾರ್ಪೊರೇಷನ್‌ಗೆ ಹೇಳುತ್ತೇವೆ ಅಂದರೆ ಆಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಹಣ ಸಹಾಯ ಮಾಡಬೇಕೆಂದು ಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹುಬ್ಬಳ್ಳಿ ನಗರದಲ್ಲಿರುವ ನೀರಿನ ಅಭಾವ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಸಲುವಾಗಿ ಈಗಾಗಲೇ ಮಲಪ್ರಭ ಸೆಕೆಂಡ್ ಸ್ಟೇಜ್‌ಗೆ ಈಗಾಗಲೇ ಅನುಮತಿ ಕೊಟ್ಟಿದ್ದೇವೆ. ಅದರ ಪ್ರಕಾರ ಶೇಕಡ 70 ರಷ್ಟು ಅಂದರೆ 6 ಕೋಟಿ 50 ಲಕ್ಷ ರೂಪಾಯಿನಷ್ಟು ಹಣವನ್ನು ಹುಡ್ಕೋದಿಂದ ಕೊಡಬೇಕಾಗುತ್ತದೆ. ಕರ್ನಾಟಕ ಅರ್ಬ ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್‌ನವರು ವ ತ್ತು ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್‌ನವರು ಸ್ವಲ್ಪ ಹಣ ಕೊಡಬೇಕಾಗುತ್ತದೆ. ಈಗಾಗಲೇ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್‌ನಿಂದ ಸುಮಾರು 3 ಕೋಟಿ 45 ಲಕ್ಷ ರೂಪಾಯಿಗೆ ಟೆಂಡರ ಕರೆದಿದ್ದೇವೆ. ಅದನ್ನು ಫೈನಲೈಸ್ ಮಾಡುತ್ತಿದ್ದೇವೆ. ಈ ಜನವರಿಯಲ್ಲಿ ಕೆಲಸ ಮಾಡುತ್ತೇವೆ. ಯಾವುದಾದರೂ ಕೆಲಸ ಮಾಡಬೇಕಾದರೆ ಟೆಂಡರ್ ಕರೆಯಬೇ ಕಾಗುತ್ತದೆ. ಈಗಾಗಲೆ,

ಅನುಮತಿ ನಾವು ಕೊಟ್ಟಿದ್ದೇವೆ. ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಕೊಳವೆ ಬಾವಿಗಳು ಬೇಕಾಗಿದೆ ಅಂಥ ಜಾಗದಲ್ಲಿ ಕೊಳವೆ ಬಾವಿಗಳನ್ನು ತೆಗೆಸುವುದಕ್ಕೆ ನಾವು ಕೆಲಸ ಮಾಡುತ್ತೇವೆ. ಆದರೆ ಸಾಂಡ್ಸಾರವರು ಒಂದು ವಿಚಾರ ತಿಳಿದುಕೊಳ್ಳಬೇಕು. ಪ್ರತಿಯೊಂದು ವಿಚಾರಕ್ಕೂ ಬರೀ ಸರ್ಕಾರದವರು ಮಾತ್ರ ಮಾಡಿದರೆ ಆಗುವುದಿಲ್ಲ. ಕಾರ್ಪೊರೇಷನ್‌ನವರೂ ದುಡ್ಡು ಕೊಡಬೇಕಾಗುತ್ತದೆ. ಆಗ ಮಾತ್ರ ಈ ನೀರಿನ ಬವಣೆ ಎದುರಿಸಲಿಕ್ಕೆ ಸಾಧ್ಯ. ಆದ್ದರಿಂದ ದಯವಿಟ್ಟು ತಾವು ತಮ್ಮ ಪ್ರಭಾವ ಉಪಯೋಗಿಸಿ ಕಾರ್ಪೊರೇಷನ್ನಿನವರು ತಮ್ಮ ಪಾಲಿನ ಹಣವನ್ನು ಆದಷ್ಟು ಜಾಗ್ರತೆ ಕೊಡುವುದಕ್ಕೆ ತಾವು ವಿನಂತಿ ಮಾಡಿಕೊಳ್ಳಬೇಕು.

ನಿಯಮ 334 ರ ಮೇರೆಗೆ ಚರ್ಚೆ

ವಿಷಯ :– (1) ಸೀಮೆ ಎಣ್ಣೆ ಮತ್ತು ಡೀಸಲ್ ಕೊರತೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ) :– ಇತ್ತೀಚೆಗೆ ಎಲ್ಲಿಡೆಗಳಿಂದಲೂ ಕೊರತೆಗಳ ಕುರಿತಾದ ದೂರುಗಳ ಸರಮಾಲೆ. ಇದಕ್ಕೆ ಕಾರಣ ಜನ ಅನುಭವಿಸುತ್ತಿರುವ ಕಷ್ಟ ಕೋಟಲೆ. ಮೊನು ಹಿಡಿಯಲು ಉಪಯೋಗಿಸುವ ಯಾಂತ್ರಿಕ ದೋಣಿಗಳಿಗೆ ಡೀಸಲ್ಲಿನ ಕೊರತೆ. ರೈತರ ಪಂಪುಸೆಟ್ಟು ಪವರ್ ಟಿಲ್ಲರುಗಳಿಗೆ ಸೀಮೆ ಎಣ್ಣೆ ಡೀಸಲ್ ಕೊರತೆ; ಆಟೋರಿಕ್ಷಾ ಟ್ಯಾಕ್ಸಿ, ಬಸ್ಸು, ಲಾರಿಗಳಿಗೆ ಬೇಕಾದ ಇಂಧನ ತೈಲದ ಕೊರತೆ. ವಿದ್ಯುತ್ತಿನ ಕಡಿತ, ಅಡುಗೆ ಅನಿಲದ ಕೊರತೆ, ಗ್ರಾಮೀಣ ಪ್ರದೇಶದಲ್ಲಿ ಬರುವ ಕಾರ್ಡುದಾರರಿಗೆ ಮತ್ತಷ್ಟು ಸೀಮೆ ಎಣ್ಣೆಯಲ್ಲಿ ಕಡಿತ. ಬೇಗ ಸಂಘಟಿತರಾಗಿರುವ, ಎಚ್ಚೆತ್ತು ಕೂಗುವ ನಗರದ ನಾಗರೀಕರಿಗೂ ಗ್ರಾಮಾಂತರ ಪ್ರದೇಶದ ಗ್ರಾಪಕರಿಗೂ ಪೂರೈಕೆಯಲ್ಲಿ ಏಕೆ ತಾರತಮ್ಯ ? ಅವರೇನು ಎರಡನೇ ದರ್ಜೆ ಪ್ರಜೆಗಳೇ ? ಹಳ್ಳಿಗಳಲ್ಲಿ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಆದರಲ್ಲೂ ಆಗಾಗ ಕಡಿತ. ಅಡುಗೆ ಅನಿಲವಂತೂ ಹಳ್ಳಿಗಳಿಗೆ ಇಲ್ಲವೇ ಇಲ್ಲ. ಈಗೀಗ ಉರುವಲು ಕೂಡ ದೊರಕದೇ ಬಡವರ ಬದುಕಿಗೆ ಉರುಳಾಗುವ ಪರಿಸ್ಥಿತಿ. ಬರೇ ನಾಲ್ಕು ಲೀಟರು ಸೀಮೆ ಎಣ್ಣೆ ಪಡೆದು ಹಳ್ಳಿಯಲ್ಲಿ ಒಲೆ ಉರಿಸುವ ಹೆಣ್ಣು ಮಕ್ಕಳಿಗೆ ಎದುರಾಗಿದೆ. ಎಲ್ಲ ದಿಕ್ಕಿನಲ್ಲಿ ಕೊರಳು ಕೊಯ್ಯುವ ಕೊರತೆ. ಇದರಿಂದಾಗಿ ನಿತ್ಯ ಕಣ್ಣೀರಿನ ಒರತೆ. ಈ ಕೊರತೆ ನೀಗಿಸಲು ಸರ್ಕಾರಕ್ಕೆ ಜನರೆಲ್ಲರ ಕಳಕಳಿಯ ಒತ್ತಾಯ. ಇದರ ಪರವಾಗಿ ನನ್ನದು ಕೊರತೆ ಇಲ್ಲದ ಒತ್ತಾಯ

ಶ್ರೀ ಟಿ. ಎನ್. ನರಸಿಂಹಮೂರ್ತಿ :– ತಾವೇ ಉತ್ತರ ಹೇಳುತ್ತೀರಾ ಸಾರ್ ಇದಕ್ಕೆ ?

ಅಧ್ಯಕ್ಷರು :– ಇಲ್ಲ. ಅವರ ಸೂಚನೆ ಬಹಳ ಕಾವ್ಯಮಯವಾಗಿದೆ.

I am impressed with that.

† ಶ್ರೀ ಟಿ. ಎನ್. ನರಸಿಂಹಮೂರ್ತಿ :– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀಮತಿ ಮನೋರಮ ಮಧ್ವರಾಜ್ ಅವರು ಅವರದೇ ಆದ ಸಾಹಿತ್ಯ ರೂಪದಲ್ಲಿ ತಮ್ಮ ಕ್ಷೇತ್ರದ ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದು, ಈ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಿಜಕ್ಕೂ ಕೂಡ ಅವರು ಪ್ರಸ್ತಾಪ ಮಾಡಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯವಾಗಿದ್ದು, ಈ ಬಗ್ಗೆ ನಾನು ಸರ್ಕಾರದ ಉತ್ತರವನ್ನು ಹೇಳುವಾಗ ಇಡೀ ಸದನ ಇದನ್ನು ಗಮನಿಸುತ್ತದೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಸರ್ಕಾರ ಸಿದ್ಧಪಡಿಸಿರುವ ಹೇಳಿಕೆಯನ್ನು ನಾನು ಈಗ ಇಲ್ಲಿ ಓದಿ ಸದನದ ಗಮನವನ್ನು ಸೆಳೆಯಬಯಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ,

ನಮ್ಮ ರಾಜ್ಯದ ಪಡಿತರ ಪ್ರದೇಶ ಮತ್ತು ಪಡಿತರೇತರ ಪ್ರದೇಶಗಳಲ್ಲಿ ಪಡಿತರ ಚೀಟಿ ಹೊಂದಿರುವವರಿಗೆ ಅವರವರ ಅವಶ್ಯಕತೆ, ಉರುವಲು ಸೌಲಭ್ಯ ಇತ್ಯಾದಿಗಳನ್ನು ಪರಿಶೀಲಿಸಿ ಆಪರಿಗೆ ಸಾಕಷ್ಟು ಸೀಮೆ ಎಣ್ಣೆಯನ್ನು ಒದಗಿಸಬೇಕಾದರೆ ಒಟ್ಟು 66,175 ಕೆ. ಎಲ್. ಸೀಮೆಎಣ್ಣೆ ಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ನೀಡುತ್ತಿರುವ ಹಂಚಿಕೆ ಕೇವಲ 45,795 ಕೆ. ಎಲ್. ಆಗಿರುತ್ತದೆ. ಇದರಿಂದಾಗಿ ಕಾರ್ಯಭಾರ ಬೇಡಿಕೆಯನ್ನು ಸಂಪೂರ್ಣವಾಗಿ ಈಡೇರಿಸಲು ಆಗುತ್ತಿರಲಿಲ್ಲ. ಸೀಮೆ ಎಣ್ಣೆ ಪ್ರಮಾಣವನ್ನು ಹೆಚ್ಚಿಸಲು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ಕೆಮಿಕಲ್ಸ್, ಮಂತ್ರಾಲಯವನ್ನು ಕೋರಲಾಗಿದ್ದು ವಿದೇಶಿ ವಿನಿಮಯದ ಮಿತಿಯಿಂದಾಗಿ ಹೆಚ್ಚಿಸಲಾಗುತ್ತಿಲ್ಲವೆಂದು ಉತ್ತರ ಬಂದಿದೆ. ಆದಾಗ್ಯೂ ಸದರಿ ಕೋರಿಕೆಯನ್ನು ಪರಿಶೀಲಿಸಿ ನವೆಂಬರ್ ತಿಂಗಳಿನಲ್ಲಿ ಹೆಚ್ಚುವರಿ ಮಾಡಿ 52,940 ಕೆ. ಎಲ್. ಸೀಮೆಎಣ್ಣೆಯನ್ನು ಕೇಂದ್ರ ಸರ್ಕಾರ ಒದಗಿಸಿದೆ.